# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ, ಬೆಂಗಳೂರು

ಸಂ: ಸ.ಅ/ವಾ-161/2021-22

ದಿನಾಂಕ : 05/02/2022

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :05-02-2022 ರಂದು ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮತಿ ಸಭೆಯ ನಡವಳಿಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ :05-02-2022 ರಂದು ವಾರ್ಡ್ ಕಛೇರಿಯಲ್ಲಿ ಬೆಳಿಗ್ಗೆ 11.30 ಗಂಟೆಗೆ ಶ್ರೀ ಧರಣೇಂದ್ರಕುಮಾರ್ ನೋಡೆಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ವೆಂಕಟಮಲವಯ್ಯ.ಕೆ ಸದಸ್ಯ ಕಾರ್ಯದರ್ಶಿ ರವರ ಕಾರ್ಯಾಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿರುತ್ತಾರೆ.

ಹಿಂದಿನ ವಾರ್ಡ್ ಸಭೆಯ ನಡವಳಿಗಳನ್ನು ಚರ್ಚಿಸಲಾಗಿರುತ್ತದೆ.

1) ಬೆಸ್ಕಾಂ ಇಲಾಖೆಯು ಅಳವಡಿಸಿರುವ ಕೇಬಲ್‌ಗಳು ರಸ್ತೆಯ ಮೇಲ್ಭಾಗದಲ್ಲಿ ಇರುವುದನ್ನು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದಾಗ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಬೆಸ್ಕಾಂ ಅಧಿಕಾರಿಗಳಿಗೆ ಕೂಡಲೇ ಕೇಬಲ್‌ಗಳನ್ನು ಸರಿಪಡಿಸಲು ಬೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.
2) ಹೊಸದಾಗಿ ಕೊರೆಯಲಾಗಿರುವ ಬೋರ್‌ವೆಲ್‌ಗೆ ಪಂಪ್‌ಗಳನ್ನು ಅಳವಡಿಸುವಂತೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ವಹಿಸುವಂತೆ ಸೂಚಿಸಿದರು.
3) ಬೃಹತ್ ನೀರುಗಾಲುವೆಯಲ್ಲಿ ಅಳವಡಿಸಿರುವ ಸ್ಯಾನಿಟರಿ ಪೈಪ್‌ಲೈನ್ ದುರಸ್ಥಿಗೊಂಡಿದ್ದು, ತುರ್ತು ಸರಿಪಡಿಸಲು ಸೂಚಿಸಲಾಗಿದೆ.
4) ಪೌರಕಾರ್ಮಿಕರಿಗೆ ಪೊರಕೆ ಶೂ ಇತ್ಯಾಧಿಗಳನ್ನು ನೀಡಿಲ್ಲದಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು

ವಾರ್ಡ್ 161 ರ ನೋಡಲ್ ಅಧಿಕಾರಿ.